# ಶ್ರೀ ವಿಜಯದಾಸಾರ್ಯಕೃತ ಪಂಚರತ್ನ ಸುಳಾದಿಗಳು

## ಶ್ರೀನರಸಿಂಹದೇವರ ಸುಳಾದಿ

ರಾಗ–ಕಲ್ಯಾಣ ಧ್ರುವತಾಳ

ವೀರ ಸಿಂಹನೆ ನಾರಸಿಂಹನೆ ದಯ ಪಾರಾ ।
ವಾರನೆ ಭಯ ನಿವಾರಣ ನಿರ್ಗುಣ ।
ಸಾರಿದವರ ಸಂಸಾರ ವೃಕ್ಷದ ಮೂಲ ।
ಬೇರರಿಸಿ ಕೀಳುವ ಬಿರಿದು ಭಯಂಕರ ।
ಘೋರಾವತಾರ ಕರಾಳವದನ ಅ ।
ಘೋರ ದುರಿತ ಸಂಹಾರ ಮಾಯಾಕಾರ ।
ಕ್ರೂರದೈತ್ಯರ ಶೋಕ ಕಾರಣ ಉದುಭವ ।
ಈರೇಳು ಭುವನ ಸಾಗರದೊಡೆಯ ।
ಆರೌದ್ರನಾಮಕ ವಿಜಯ ವಿಠ್ಠಲ ನಾರಸಿಂಗ ।
ವೀರರಸಾತುಂಗ ಕಾರುಣ್ಯಪಾಂಗ ॥೧॥

–ಮಟ್ಟತಾಳ–

ಮಗುವಿನ ರಕ್ಕಸನು ಹಗಲಿರುಳು ಬಿಡದೆ ।
ಹಗೆಯಿಂದಲಿ ಹೊಯ್ದು ನಗಪನ್ನಗ ವನಧಿ ।
ಗಗನ ಮಿಗಿಲಾದ ಅಗಣಿತ ಬಾಧಿಯಲಿ ।
ನೆಗೆದು ಒಗದು ಸಾವು ಬಗದು ಕೊಲ್ಲುತಿರಲು ಹೇ ।
ಜಗದ ವಲ್ಲಭನೇ ಸುಗುಣಾನಾದಿಗನೇ ।
ನಿಗಮಾ ವಂದಿತನೇ ಪೊಗಳಿದ ಭಕುತರ ।
ತಗಲಿ ತೊಲಗನೆಂದು ಮಿಗೆ ಕೂಗುತಲಿರಲು ।
ಯುಗ ಯುಗದೊಳು ದಯಾಳುಗಳ ದೇವರದೇವ ।
ಯುಗಾದಿ ಕೃತನಾಮಾ ವಿಜಯ ವಿಠ್ಠಲ ಹೋ ಹೋ ।
ಯುಗಳ ಕರವ ಮುಗಿದು ಮಗುವು ಮೊರೆ ಇಡಲು ॥೨॥

–ರೂಪಕತಾಳ–

www.YouSigma.com

ಕೇಳಿದಾಕ್ಷಣದಲಿ ಲಾಲಿಸಿ ಭಕ್ತನ್ನ ಮೌಳಿ ವೇಗದಲಿ ಪಾಲಿಸುವೆನೆಂದು ।
ತಾಳಿ ಸಂತೋಷವ ತೂಳಿ ತುಂಬಿದಂತೆ ।
ಮೂಲೋಕದ ಪತಿವಾಲಯದಿಂದ ಸು- ।
ಸ್ತೀಲ ದುರ್ಲಭ ನಾಮ ವಿಜಯ ವಿಠ್ಠಲ ಪಂಚ ।
ಮೌಳಿ ಮಾನವ ಕಂಭ ಸೀಳಿ ಮೂಡಿದ ದೇವ ॥೩॥

-ಝಂಪೆತಾಳ-

ಲಟಲಟಾ ಲಟಲಟಾ ಲಟ ಕಟಿಸಿ ವನಜಜಾಂಡ ।
ಕಟಹ ಪಟ ಪಟ ಪುಟುತ್ಕಟದಿ ಬಿಚ್ಚುತಲಿರಲು ।
ಪುಟ ಪುಟ ಪುಟನೆಗೆದು ಚೀರಿಹಾರುತ್ತ ಪ ।
ಲ್ಕಟಕಟಾ ಕಟ ಕಡಿದು ರೋಷದಿಂದ ।
ಮಿಟಿ ಮಿಟಿ ಮಿಟನೆ ರಕ್ತಾಕ್ಷಿಯಲ್ಲಿ ನೋಡಿ ।
ತಟಿತ್ಕೋಟಿ ಊರ್ಭಟಗೆ ಅರ್ಭಟವಾಗಿರಲು ।
ಕುಟಿಲ ರಹಿತ ವ್ಯಕ್ತ ವಿಜಯ ವಿಠ್ಠಲ ಶಕ್ತ ।
ದಿಟ ನಿಟಿಲ ನೇತ್ರ ಸುರಕಟಕ ಪರಿಪಾಲಾ ॥೪॥

-ತ್ರಿವಿಡಿತಾಳ-

ಬೊಬ್ಬಿರಿಯೇ ವೀರ ಧ್ವನಿಯಿಂದ ತನಿಗಿಡಿ ।
ಹಬ್ಬಿ ಮುಂಚೋಣಿ ಉರಿ ಹೊರಗೆದ್ದು ಸುತ್ತೆ ।
ಉಬ್ಬಸ ರವಿಗಾಗೆ ಅಬ್ಜನಡುಗುತಿರೆ ।
ಅಬ್ಧಿಸಪುತ ಉಕ್ಕಿ ಹೊರಚೆಲ್ಲಿ ಬರುತಿರೆ ।
ಅಬುಜ ಭವಾದಿಗಳು ತಬ್ಬಿಬ್ಬಿ ಗೊಂಡಾರಿ ।
ಅಬ್ಬರವೇನೆನುತ ನಭದ ಗೂಳಿಯು ತಗಿಯೆ ।
ಶಬ್ದ ತುಂಬಿತು ಅವ್ಯಾಕೃತಾಕಾಶ ಪರಿಯಂತ ।
ನಿಬ್ಬರ ತರುಗಿರಿ ಝುರಿ ಝುರಿಸಲು ।
ಓಬ್ಬರಿಗೊಶವಲ್ಲದ ನಮ್ಮಾ ವಿಜಯ ವಿಠ್ಠಲ ।
ಇಬ್ಬಗೆಯಾಗಿ ಕಂಭದಿಂದ ಪೊರಮಟ್ಟಾ ॥೫॥

www.YouSigma.com

-ಅಟ್ಟತಾಳ-

ಘುಡಿ ಘುಡಿಸುತ ಕೋಟಿ ಸಿಡಿಲು ಗಿರಿಗೆ ಬಂದು ।
ಹೊಡೆದಂತೆ ಚೀರಿ ಬೊಬ್ಬಿಡುತಲಿ ಲಂಘಿಸಿ ।
ಹಿಡಿದು ರಕ್ಕಸನ್ನ ಕೆಡಹಿ ಮಡುಹಿ ತುಡುಕಿ ।
ತೊಡಿಯ ಮೇಲಿರಿಸಿ ಹೇರೊಡಲ ಕೊರುಗುರದಿಂದ ।
ಪಡುವಲ ಗಡಲ ತಡಿಯ ತರಣಿಯ ನೋಡಿ ।
ಕಡುಕೋಪದಲ್ಲಿ ಸದಬಡಿದು ರಕ್ಕಸನ ಕೆಡಹಿ ।
ನಿಡಿಗರಳನು ಕೊರಳಡಿಯಲ್ಲಿ ಧರಿಸಿದ ಸಡಗರದ ದೈವ ।
ಕಡುಗಲಿ ಭೂಭೂರ್ವ ವಿಜಯ ವಿಠ್ಠಲ ।
ಪಾಲ್ಗಡಲೋಡೆಯಾ ಶರಣರ ವಡೆವೆ ವಡನೊಡನೆ ॥೬॥

-ಆದಿತಾಳ-

ಉರಿಮಸೆಗೆ ಚತುರ್ದಶ ಧರಣಿ ತಲ್ಲಣಿಸಲು ।
ಪರಮೇಷ್ಠಿ ಹರಸುರರು ಸಿರಿದೇವಿಗೆ ಮೊರೆಯಿಡಲು ।
ಕರುಣದಿಂದಲಿ ತನ್ನ ಶರಣನ್ನ ಸಹಿತ ನಿನ್ನ ।
ಚರಣಕ್ಕೆ ಎರಗಲು ಪರಮ ಶಾಂತನಾಗಿ ।
ಹರಹಿದೆ ದಯವನ್ನು ಸುರರು ಕುಸುಮ ವರುಷ ।
ಗರಿಯಲು ಭೇರಿ ವಾದ್ಯ ಮೊರೆ ಉತ್ತರರೆ ಎನುತ ।
ಪರಿಪರಿ ವಾಲಗ ವಿಸ್ತಾರದಿಂದ ಕೈಕೊಳ್ಳುತ್ತ ।
ಮೆರೆದು ಸುರರುಪದ್ರ ಹರಿಸಿ ಬಾಲಕನ ಕಾಯ್ದೆ ।
ಪರದೈವ ಗಂಭೀರಾತ್ಮ ವಿಜಯ ವಿಠ್ಠಲ ನಿಮ್ಮ ।
ಚರಿತೆ ದುಷ್ಟರಿಗೆ ಭೀಕರವೋ ಸಜ್ಜನ ಪಾಲ ॥೭॥

-ಜತೆ-

ಪ್ರಹ್ಲಾದವರದ ಪ್ರಪನ್ನ ಕ್ಲೇಶಭಂಜನ್ನ ।
ಮಹಾಹವಿಷೆ ವಿಜಯವಿಠ್ಠಲ ನರಮೃಗವೇಷಾ ॥೮॥

www.YouSigma.com